	ಗಿರಿಜನ ಉಪಯೋಜನೆ				
4	Special component plan ವಿಶೇಷ ಘಟಕ ಯೋಜನೆ	4887.00	4887.00	4156.40	730.60
5	Karnataka Agriculture mission ಕರ್ಣಿನ ಕೃಷಿ ಮಿಷನ್	50.00	50.00	12.41	37.59

ಲೋಕೋಪಯೋಗಿ ಯೋಜನೆಗಳು

975 (1264) ಡಾ. ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಯ Suvarna Rasthe Vikasa Jojane, Dredging, Karnataka Information Commission-Construction, Legislator's Home – works ಈ ಯೋಜನೆಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ.

ಆ) ಈ ಯೋಜನೆಗಳಿಗೆ ಬಿಡುಗಡೆಯಾದ ಮೊತ್ತ ಎಷ್ಟು; ವೆಚ್ಚದ ವಿವರ ನೀಡುವುದು;

ಇ) ವೆಚ್ಚ ಮಾಡದೇ ಉಳಿದಿರುವ ಮೊತ್ತವೆಷ್ಟು? (ವಿವರ ನೀಡುವುದು);

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಸುವರ್ಣ ರಸ್ತೆ ವಿಕಾಸ ಯೋಜನೆ ಅಡಿ ರೂ.10000.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

ಕರ್ನಾಟಕ ಮಾಹಿತಿ ಆಯೋಗಕ್ಕೆ ರೂ.250.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

Legislator's Home – Works ನ ಕಾಮಗಾರಿಗಳಿಗಾಗಿ ರೂ.100.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

Dredging ಕಾಮಗಾರಿಗಳಿಗಾಗಿ ರೂ.500.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

ಆ) 2009–10ನೇ ಸಾಲಿನ ಆಯವ್ಯಯದಲ್ಲಿ ಸುವರ್ಣ ರಸ್ತೆ ವಿಕಾಸ ಯೋಜನೆಯಡಿ ಆರ್ಥಿಕ ಇಲಾಖೆಯ ಬಿಡುಗಡೆಗನುಸಾರವಾಗಿ ಈವರೆವಿಗೂ ಒಟ್ಟು ರೂ.6900.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಕರ್ನಾಟಕ ಮಾಹಿತಿ ಆಯೋಗಕ್ಕೆ ಆರ್ಥಿಕ ಇಲಾಖೆಯಿಂದ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

Legislator's Home - Works ಆರ್ಥಿಕ ಇಲಾಖೆಯಿಂದ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

Dredging ಕಾಮಗಾರಿಗಳಿಗಾಗಿ ಯಾವುದೇ ಅನುದಾನ ಬಳಕೆಯಾಗಿರುವುದಿಲ್ಲ.

ಇ) ಸುವರ್ಣ ರಸ್ತೆ ವಿಕಾಸ ಯೋಜನೆಯಡಿ ಆರ್ಥಿಕ ಇಲಾಖೆಯಿಂದ ಈವರೆವಿಗೂ ಬಿಡುಗಡೆ ಮಾಡಲಾಗಿರುವ ರೂ.6900.00 ಲಕ್ಷಗಳನ್ನು ದಕ್ಷಿಣ ಮತ್ತು ಉತ್ತರ ವಲಯಗಳ ವ್ಯಾಪ್ತಿಯಲ್ಲಿನ ವಿವಿಧ ವಿಭಾಗಗಳಿಗೆ ಬಿಡುಗಡೆ ಮಾಡಲಾಗಿದ್ದು, ರೂ.3100.00 ಲಕ್ಷಗಳ ಅನುದಾನ ಉಳಿಕೆಯಾಗಿರುತ್ತದೆ.

ಕರ್ನಾಟಕ ಮಾಹಿತಿ ಆಯೋಗದಡಿ ಹಾಗೂ Legislator's Home – ಕಾಮಗಾರಿಗಳಡಿ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ ವಾದ್ದರಿಂದ ಯಾವುದೇ ವೆಚ್ಚ ಮಾಡಿರುವುದಿಲ್ಲ.

ರೂ.1500.00 ಲಕ್ಷಗಳ ಅಂದಾಜು ಮೊತ್ತದ Dredging ಕಾಮಗಾರಿಗಳಿಗೆ ಅನುಮೋದನೆ ದೊರೆತ ನಂತರ ಈ ಕಾಮಗಾರಿಗಳಿಗಾಗಿ ಒದಗಿಸಲಾಗಿರುವ ರೂ.500.00 ಲಕ್ಷಗಳ ಅನುದಾನವನ್ನು ವೆಚ್ಚಮಾಡ ಲಾಗುವುದು.